ಶ್ರೀ ಎಸ್. ಗೋಪಾಲಗೌಡರು.—ರೂರಲ್ ವೆಲ್ ಪೇರ್ ಯೋಜನೆಗಾಗಿ ಒಟ್ಟು 55 ಲಕ್ಷ 78 ಸಾವಿರದ 316 ರೂಪಾಯಿಗಳ ಖರ್ಚನ್ನು ತೋರಿಸಿದ್ದೀರಿ. ಇದನ್ನು ಯಾವ ಯಾವ ಬಾಬುಗಳಿಗಾಗಿ, ಎಷ್ಟೆಷ್ಟು ಖರ್ಚು ಮಾಡಲಾಗಿರುತ್ತೆಂಬುದನ್ನು ತಿಳಿಸುವುದಕ್ಕೆ ಸಾಧ್ಯವೆ ?

Mr. SPEAKER.—The Hon'ble Member need not go into details at this stage.

ಶ್ರೀ ಎಂ. ಲಿಂಗಣ್ಣನವರು (ನಂಜನಗೂಡು).—ಹಾಗೆ ಈ ಬಾಬಿನಲ್ಲಿ ತಾವು ಒಟ್ಟು ಎಷ್ಟು ಪ್ಯಾನು ಗಳನ್ನು ಕೊಂಡುಕೊಳ್ಳಲಾಗಿತ್ತು?

ಶ್ರೀ ಟಿ. ಚೆನ್ನಯ್ಯನವರು.—ಒಟ್ಟು ಒಂಭತ್ತು ಜಿಲ್ಲೆಗಳಿಗೆ ಒಂಬತ್ತು ಪ್ಯಾನುಗಳನ್ನು ಕೊಂಡುಕೊಳ್ಳ ಲಾಗಿತ್ತು.

ಶ್ರೀ ಎಂ. ಲಿಂಗಣ್ಣನವರು.—ಈಗ ಆ ಸಮಿತಿಗಳನ್ನು ರದ್ದುಪಡಿಸಬೇಕೆಂದಿರುವಾಗ ಈ ಪ್ಯಾನುಗಳನ್ನು ತಾವು ಆ ಸಮಿತಿಗಳ ವಶದಲ್ಲೇ ಬಿಟ್ಟಿದ್ದೀರೋ ಅಥವಾ ವಾಪಸ್ಸು ತೆಗೆದುಕೊಂಡಿದ್ದೀರೋ ?

ಶ್ರೀ ಟಿ. ಚೆನ್ನಯ್ಯನವರು.—ಅವುಗಳನ್ನೆಲ್ಲಾ ವಾಪಸ್ಸು ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಲಿಂಗಣ್ಣನವರು.—ಈಗ ಅವುಗಳನ್ನು ಹೇಗೆ ವಿಲೇ ಮಾಡಬೇಕೆಂಬ ಯೋಚನೆ ಮಾಡಿದ್ದೀರಿ ?

ಶ್ರೀ ಟಿ. ಚೆನ್ನಯ್ಯನವರು.—ಆ ವಿಚಾರಗಳನ್ನೆಲ್ಲಾ ಈಗ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಲಿಂಗಣ್ಣನವರು.—ಇವುಗಳನ್ನು ಈಗ ಏನಾದರೂ ಬೇರೆ ಕೆಲಸ ಕಾರ್ಯಗಳಿಗೆ ಉಪಯೋಗಿಸ ಲಾಗುತ್ತಿದೆಯೋ ಅಥವಾ ಹಾಗೆಯೇ ಸುಮ್ಮನೆ ನಿಲ್ಲಿಸ ಲಾಗಿದೆಯೋ ?

ಶ್ರೀ ಟಿ. ಚೆನ್ನಯ್ಯನವರು.—ಉಪಯೋಗದಲ್ಲಿಡ ಲಾಗಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಮಾಲೂ ರು).—ಈ ರೂರಲ್‌ಡೆವಲಪ್‌ಮೆಂಟ್ ಪ್ಯಾನುಗಳನ್ನು ಪ್ರಚಾರ ಕಾರ್ಯಕ್ಕಾಗಿ ಹಿಂದೆ ಉಪಯೋಗಿಸಲಾಗು ತ್ತಿತ್ತಲ್ಲವೇ ?

ಶ್ರೀ ಟಿ. ಚೆನ್ನಯ್ಯನವರು.—ಹೌದು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಈಗ ಆ ಪ್ಯಾನುಗಳನ್ನು ತಾವು ವಾಪಸ್ಸು ತರಿಸಿಕೊಂಡ ಮೇಲೆ ಆ ಪ್ರಚಾರ ಕಾರ್ಯಕ್ರಮಗಳು ಹೇಗೆ ನಡೆ ಯುತ್ತಿವೆ ?

ಶ್ರೀ ಟಿ. ಚೆನ್ನಯ್ಯನವರು.—ಇನ್ನು ಮೂರು ತಿಂಗಳ ವರೆಗೆ ಪ್ರಚಾರ ಕಾರ್ಯ ನಡೆಸಲು ಸಕಲಕಾರ್ಯಗಳನ್ನು ಏರ್ಪಡಿಸಲಾಗಿದೆ. ಅನಂತರ ಮೂರು ತಿಂಗಳಾದ ಮೇಲೆ, ಇದನ್ನು ನಿಲ್ಲಿಸಲಾಗುತ್ತದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ತಾವೀಗ ಈ ರೂರಲ್ ಡೆವಲಪ್‌ಮೆಂಟ್ ಸಮಿತಿಗಳನ್ನು ತೆಗೆದು ಹಾಕಿದರೆ, ಮುಂದಕ್ಕೆ ಈ ಕೆಲಸಗಳನ್ನೆಲ್ಲಾ ಹೇಗೆ ನಡೆ ಸುವಿರಿ ?

ಶ್ರೀ ಟಿ. ಚೆನ್ನಯ್ಯನವರು —ಅದನ್ನು ಆಲೋಚನೆ ಮಾಡುತ್ತಿದ್ದೇವೆ.

———

Drinking Water Wells in Gundlupet.

Q—353. **Sri H. K. SHIVARUDRAPPA** (Gundlupet -Heggaddevankote).—

Will the Government be pleased to state :—

(*a*) the population of Gundlupet Town ;

(*b*) the number of drinking water wells there ;

(*c*) the average depth of those wells ;

(*d*) whether they have undertaken any scheme to provide drinking water there ;

(*e*) if so, the details of the scheme and when it would be implemented ?

A.—**Sri T. CHANNIAH** (Minister for Public Health and Local Self-Government).—

(*a*) 10,876 as per Census of 1951.

(*b*) 45.

(*c*) The average depth of each well varies from 60 to 65 feet.

(*d*) and (*e*) Yes. The scheme for the comprehensive water-supply to the Town was estimated to cost Rs. 2,05,995 during the year 1950-51. The cost was propos d to be shared by the Municipal Council and Government in equal proportions and Government was requested to advance a loan to meet the Municipal quota. As the finances of the Municipal Council were not sound to meet the recurring and non-recurring charges, the scheme was deferred till its resources are improved.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ತಾವು ಕೊಟ್ಟಿರತಕ್ಕ (ಡಿ) ಮತ್ತು (ಇ) ಪ್ರಶ್ನೆಗಳ ಉತ್ತರಕ್ಕೆ ಅನುಸಾರವಾಗಿ ತಾವು ಪುನಃ ಪೌರಸಭೆಯವರಿಂದ ಏನಾದರೂ ವರದಿಯನ್ನು ತರಿಸಿಕೊಂಡಿದ್ದೀರಾ ?

ಶ್ರೀ ಟಿ ಚೆನ್ನಯ್ಯನವರು.—ಕಾಲ್‌ಫಾರ್ ಮಾಡಿ ದ್ದೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ 2,05,995 ರೂಪಾಯಿಗಳಲ್ಲಿ ಅರ್ಧ ಭಾಗ ಕೊಡಲು ಸಾಧ್ಯವಿಲ್ಲವೆಂದು ಪೌರಸಭೆಯವರು ತಮಗೆ ತಿಳಿಸಿ ದ್ದಾರೆಯೇ?

ಶ್ರೀ ಟಿ. ಚೆನ್ನಯ್ಯನವರು.—ಪೌರಸಭೆಯವರು ಈ ಬಗ್ಗೆ ಸಾಲಬೇಕೆಂದು ಸರ್ಕಾರಕ್ಕೆ ಮನವಿಮಾಡಿ ಕೊಂಡಿದ್ದರು. ಆದರೆ ಹಾಗೆ ಪಡೆದ ಸಾಲವನ್ನು ತೀರಿಸಲು ಅವರಿಗೆ ರಹದಾರಿಗಳೇನಿವೆ ಎಂಬುದನ್ನು ಸರ್ಕಾರಕ್ಕೆ ತಿಳಿಸಬೇಕೆಂದು ಕೇಳಿದ್ದೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಅವರು ಹಾಗೆ ತಮ್ಮ ಕೊನೆಯ ತೀರ್ಮಾನವನ್ನು ವ್ಯಕ್ತಪಡಿಸಿಲ್ಲವಾದ್ದ

ರಿಂದ ಸರ್ಕಾರದವರು ಆ ಪೌರ ಸಭೆಗೆ ಹಣ ಸಹಾಯ ಮಾಡುವುದನ್ನು ಪುನರ್ವಿಮರ್ಶೆ ಮಾಡುತ್ತಾರೆಯೆ ?

Mr. SPEAKER.—It need not be answered.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಅವರು ಅಂಥ ರಹದಾರಿಗಳನ್ನು ಒದಗಿಸಿಕೊಳ್ಳಲು ಸಾಧ್ಯವಿಲ್ಲ ವೆಂದು ಆಜ್ಞೆರಾಗಿ ಹೇಳಿರುತ್ತಾರೆಯೇ ?

Mr. SPEAKER.—The Hon'ble Minister need not answer that.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ ಆವೃತ್ತ-ಅನಾವೃತ್ತ ಖರ್ಚುಗಳೆಲ್ಲ ಒಟ್ಟು ಎಷ್ಟಾಗುತ್ತದೆಂಬು ದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಟಿ. ಚೆನ್ನಯ್ಯನವರು.—ಒಟ್ಟು 17 ಸಾವಿರದ 264 ರೂಪಾಯಿಗಳು ಖರ್ಚಾಗುತ್ತವೆ. ಈ ಪೈಕಿ, 8,264 ರೂಪಾಯಿಗಳು ನೀರು ಸರಬರಾಯಿಗಾಗಿ ಖರ್ಚಾಗುತ್ತವೆ. ಇದನ್ನು ಮುಂದೆ ಸರ್ಕಾರಕ್ಕೆ ಮುನಿಸಿಪಾಲಿಟಿಯವರು ಯಾವ ರೀತಿಯಲ್ಲಿ ತೀರಿಸಲು ಸಾಧ್ಯವಿದೆ ಮತ್ತು ಆ ಮೊಬಲಗನ್ನು ಯಾವ ಫಂಡಿ ನಿಂದ ಮಾಫ್ ಮಾಡಲಾಗುತ್ತದೆ ಎಂಬ ವಿವರಗಳನ್ನು ಕೇಳಿದ್ದೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಅವರು ತಮಗೆ ಖೋತಾ ಬಜೆಟ್ಟಿದೆ, ಈ ಖರ್ಚನ್ನು ಕೊಡುವು ದಕ್ಕಾಗುವುದಿಲ್ಲವೆ ದು ತಿಳಿಸಿಲ್ಲವೇ ?

ಶ್ರೀ ಟಿ. ಚೆನ್ನಯ್ಯನವರು.—ಅವರು ತಿಳಿಸಿಲ್ಲ.

ಶ್ರೀ ಎಚ್.ಕೆ. ಶಿವರುದ್ರಪ್ಪನವರು.—ಇಂಥ ಸಾಲದ ಅವಕಾಶವನ್ನು ತಾವು ಮುತ್ತೆ ಯಾರಿಗೂ ಕೊಡಲಾಗಿ ಲ್ಲವೇ ?

ಶ್ರೀ ಟಿ. ಚೆನ್ನಯ್ಯನವರು.—ಕೊಡಲಾಗಿದೆ.

ಶ್ರೀ ಎಂ. ಲಿಂಗಣ್ಣನವರು (ನಂಜನಗೂಡು).—ಆ ಮುನಿಸಿಪಾಲಿಟಿಯವರು ಅವರ ಅನಿವಾರ್ಯವನ್ನು ತಮಗೆ ತಿಳಿಸಿದ್ದು ಯಾವಾಗ ?

ಶ್ರೀ ಟಿ. ಚೆನ್ನಯ್ಯನವರು.—ತಾ। 28-6-50ರಲ್ಲಿ.

ಶ್ರೀ ಎಂ. ಲಿಂಗಣ್ಣನವರು.—ಹಾಗೆ ಅವರು ತಿಳಿ ಸಿದ ಮೇಲೆ 2 ವರ್ಷಗಳು ಕಳೆದು ಹೋಗಿರುವುದರಿಂದ ಈಗ ಪುನಃ ಅದರ ಭದ್ರತೆ ಅಥವಾ ನಾಭದ್ರತೆಯ ವಿಷಯವಾಗಿ ತನಿಖೆಯನ್ನೇನಾದರೂ ನಡೆಸಿದ್ದೀರಾ ?

ಶ್ರೀ ಟಿ ಚೆನ್ನಯ್ಯನವರು.—ಮುನಿಸಿಪಾಲಿಟಿಯ ವರು ಮಾಡತಕ್ಕ ಖರ್ಚಿಗೆ ಸರಿಯಾದ ಉತ್ಪತ್ತಿಮಾರ್ಗ ವನ್ನು ತೋರಿಸಲು ಸರ್ಕಾರ ಕೇಳಿದೆ. ಹಾಗೆ ಅವರು ಅದನ್ನು ತೋರಿಸಿದರೆ ಆಪರಿಗೆ ಸಲ್ಲಬೇಕಾದ ಗ್ರಾಂಟನ್ನು ಮಂಜೂರು ಮಾಡಲಾಗುತ್ತದೆ.

Drinking Water Wells in Hangala.

Q.—360. Sri H. K. SHIVARUDRAPPA (Gundlupet-Heggaddevankote).—

Will the Government be pleased to state :—

(*a*) the population of Hangala in Gundlupet Taluk ;

(*b*) the number of drinking water wells in the above village ;

(*c*) the average depth of those wells ;

(*d*) in how many of the wells there is water ; and whether they are aware that the people of those villages are experiencing difficulty for water ;

(*e*) if so, the steps Government have taken to provide water facilities to the above-mentioned village ?

A.—Sri T. CHANNIAH (Minister for Public Health and Local Self-Government).—

(*a*) 2,769.

(*b*) 13.

(*c*) 60 to 70 feet.

(*d*) 11 wells.

Yes ; on account of the distance of the wells from the village.

(*e*) An estimate for Rs. 16,600 towards the capital expenditure for having protected water supply to this village has been prepared. The annual maintenance charge will be Rs. 2,500. The question is being examined.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಉತ್ತರದಲ್ಲಿ 11 ಬಾವಿಗಳೆಂದು ತಿಳಿಸಿದ್ದೀರಿ. ಆದರೆ ಆ ಊರಿನ ಜನರು ಈ ಧಿವಸ ಕುಡಿಯುವ ನೀರನ್ನು ಈ ಬಾವಿಗ ಳಿಂದಲೇ ತರುತ್ತಿದ್ದಾರೆಂದು ತಾವು ಗಮನಿಸಿದ್ದೀರಾ?

ಶ್ರೀ ಟಿ. ಚೆನ್ನಯ್ಯನವರು.—ಈ 11 ಬಾವಿ ಗಳಲ್ಲೂ ನೀರಿರುವುದರಿಂದ, ಅವರು ಈ ಬಾವಿ ಗಳಿಂದಲೇ ನೀರನ್ನು ಬಳಸುತ್ತಿದ್ದಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಹಾಗಿಲ್ಲ. ಈ ಬಾವಿಗಳಲ್ಲಿ ನೀರು ಇಲ್ಲದೆ ಅವರು ಸಮೀಪದ ಕೆರೆ ಯೊಂದರಿಂದ ನೀರನ್ನು ತರುತ್ತಿದ್ದಾರೆಂದರೆ ಅದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಟಿ. ಚೆನ್ನಯ್ಯನವರು.—ನಮಗೆ ಆ ವಿಚಾರ ತಿಳಿಯದು.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ ತಾಲ್ಲೂಕಿನ ಅನೇಕ ಬಾವಿಗಳಲ್ಲಿ ನೀರಿರುವುದಿಲ್ಲವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

Sri T. CHANNIAH.—ಇರಬಹುದು. We have no information.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ ಅಂದಾ ಜನ್ನು ತಾವು ತಯಾರಿಸಿದ್ದು ಯಾವಾಗ ?

Sri T. CHANNIAH.—Notice.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ ಎಲ್ಲಾ ತಾಲ್ಲೂಕಿನ ಜನರಿಗೆ ತುಂಬಾ ತೊಂದರೆಯಾಗಿರುವು ದರಿಂದ ಅದನ್ನು ಪರಿಹರಿಸಲು ತಾವು ಬೇಗ ಕಾರ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆಯೇ ?

Mr. SPEAKER.—Please read the last sentence in the printed answer. it is said the question is being examined.